O.S.No. 197/2007 PW - 1

ದಿನಾಂಕ: 20.11.2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ವಾದಿಯ ಪರ ವಕೀಲರಿಂದ

ನಾನು ನನ್ನ ಪರ ಸಾಕ್ಷಿಯಾಗಿ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ಭೂ ನ್ಯಾಯ ಮಂಡಳಿಯ ಆದೇಶದ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1986 ರಲ್ಲಿ ನಿಪಿ-10 ರಂತೆ 20 ಗುಂಟೆಗೆ ಆದೇಶವಾಗಿದೆ. ನಿಪಿ-10 ರ ದಾಖಲೆ ನನ್ನ ಬಳಿ ಇತ್ತು. ದಾವೆ ಹಾಕುವ ಸಂದರ್ಬದಲ್ಲಿ ನ್ಯಾಯಾಲಯಕ್ಕೆ ನಿಪಿ-10 ಅನ್ನು ಹಾಜರುಪಡಿಸಲು ನನಗೆ ತೊಂದರೆ ಇರಲಿಲ್ಲ , ಆದರೆ ಆ ಸಮಯದಲ್ಲಿ ಅದು ಸಿಕ್ಕಿರಲಿಲ್ಲ. ನಿಪಿ-10 ರ ಆದೇಶದಂತೆ 20 ಗುಂಟೆಗೆ ಆದೇಶ ನನ್ನ ತಂದೆ ಹೆಸರಿಗೆ ಆಗಿದ್ದು , ಅವರು ಖಾತೆ ಮಾಡಿಸಿದರೋ ಇಲ್ಲವೋ ನನಗೆ ಗೊತ್ತಿಲ್ಲ. 20 ಗುಂಟೆಗೆ ನಮ್ಮ ತಂದೆಗೆ ಆದೇಶ ಆದ ಬಗ್ಗೆ ದಾಖಲೆ ಸಿಕ್ಕ ನಂತರ ತಿಳಿಯಿತು. ನಿಪಿ-10 ರಂತೆ ಗ್ರ್ಯಾಂಟ್ ಆದಾಗ ಸ್ಕೆಚ್ ಮಾಡಿಸಿದ್ದೆವೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಸಹ ತಹಶೀಲ್ದಾರ್ ಕಛೇರಿಗೆ ಖಾತೆ ಬದಲಾವಣೆಗೆ ಯಾವುದೇ ಅರ್ಜಿ ಸಲ್ಲಿಸಿಲ್ಲ. ಪ್ರಸಾದಾಚಾರಿಯವರನ್ನು

ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸಾಕ್ಷಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸರ್ವೆ ನಂ. 7/4, 141/1 ರಲ್ಲಿ 20 ಗುಂಟೆ ಗ್ರ್ಯಾಂಟ್ ಆಗಿದೆ. ನಿಪಿ-10 ರಲ್ಲಿ ಗ್ರ್ಯಾಂಟ್ ಆದ ಸ್ವತ್ತಿನ ಚಕ್ಕುಬಂಧಿ ಬರೆದಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯಾಗಲೀ, ನಾನಾಗಲೀ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರಲಿಲ್ಲ , ಉಳುಮೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.  ದಾವೆಯನ್ನು 20 ಗುಂಟೆಗೆ ಸಂಬಂಧಿಸಿದಂತೆ ಹಾಕಿರುತ್ತೇನೆ. ದಾವೆಯನ್ನು ಸರ್ವೆ ನಂ. 7/4 ರಲ್ಲಿ 1 ಎಕರೆ 5 ಗುಂಟೆ, ಸರ್ವೆ ನಂ. 141/1 ರಲ್ಲಿ 1 ಎಕರೆ 6 ಗುಂಟೆ ಹಾಕಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈ ಮುಂಚೆ ಯಾವುದೇ ಗ್ರ್ಯಾಂಟ್ ಸರ್ಟಿಫಿಕೇಟ್ ಹಾಜರುಪಡಿಸಿಲ್ಲ . ಪ್ರತಿವಾದಿಗಳ ಜಮೀನನ್ನು ಕಬಳಿಸಲು ನಿಪಿ-10 ಅನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.  ದಾವಾ ಸ್ವತ್ತಿನ ಸ್ವಾಧೀನದಲ್ಲಿ ವಾದಿಯೇ ಇದ್ದಾರೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ